<u>೨ ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಪಾಂಡವಪುರ.</u>

## ಸಿ.ಸಿ. 410/2022

<u>ಸಾಕ್ಷಿದಾರರ ಹೇಳಿಕೆ ಃ</u>

| | | |
|---|---|---|
| ಹೆಸರು | ಃ ಗೋವಿಂದರಾಜು | ಚಾಸಾಃ **8** ಪ್ರಾಸಾಃ **8** |
| ತಂದೆಯ ಹೆಸರು | ಃ ಬೆಟ್ಟೇಗೌಡ | |
| ವಯಸ್ಸು | ಃ 50 ವರ್ಷ | |
| ವೃತ್ತಿ | ಃ ಸರ್ವೇಯರ್ | |
| ವಾಸಸ್ಥಳ | ಃ ಕ್ಯಾತನಹಳ್ಳಿ ಗ್ರಾಮ | |

ದಿನಾಂಕಃ **24-03-2026** ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ.ರವರಿಂದ ಃ</u>

**01.** ದಿಃ 16.09.2021 ರಂದು ತಹಶೀಲ್ದಾರ್ ರವರ ನಿರ್ದೇಶನದಂತೆ ದೊಡ್ಡಬ್ಯಾಡರಹಳ್ಳಿಯಲ್ಲಿ ನೀರಿದ ಟ್ಯಾಂಕ್ ನಿರ್ಮಾಣ ಮಾಡಲು ಸರ್ವೇ ನಂ-57 ನ್ನು ಗುರುತಿಸಿದ್ದರು. ತಹಶೀಲ್ದಾರ್ ರವರು, ಪಿ.ಡಿ.ಒ., ಆರ್.ಐ., ವಿ.ಐ., ಎಲ್ಲರೂ ಬಂದಿದ್ದರು. ಸ್ಥಳದಲ್ಲಿ ಅಳತೆ ಮಾಡಿದೆವು. ಸರ್ವೇ ನಂ-57/2 ರಲ್ಲಿ ಸಾಕಷ್ಟು ಜನ ಮಾಲೀಕರು ಇದ್ದು, ಅದನ್ನು ನಾವು ಹದ್ದುಬಸ್ತು ಮಾಡಲಿಲ್ಲ. ಸರ್ವೇ ನಂ-57/2 ರಲ್ಲೆ ನೀರಿದ ಟ್ಯಾಂಕ್ ಗಾಗಿ ಗುರುತು ಮಾಡಿಕೊಂಡೆವು. ಗುರುತಿಸಿದ ಸ್ಥಳದಲ್ಲಿ ಕಲ್ಲನ್ನು ನೆಟ್ಟೆನು.

ನಾವು ಹದ್ದುಬಸ್ತು ಮಾಡುವ ಕಾಲಕ್ಕೆ ಸ್ಥಳದಲ್ಲಿ ಗ್ರಾಮಸ್ಥರು ಇದ್ದರು. ಯಾರು ಗಲಾಟೆ ಮಾಡಿಲ್ಲ. ಬೇರೆ ಏನು ಗೊತ್ತಿಲ್ಲ.

**(ಈ ಹಂತದಲ್ಲಿ ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಸ.ಸ.ಅ.ರು ಅನುಮತಿ ಕೋರಿರುತ್ತಾರೆ. ಅನುಮತಿಸಲಾಯಿತು.)**

<u>ಪಾಟೀ ಸವಾಲು ಃ ಸ.ಸ.**ಅ.**ರವರಿಂದ ಃ</u>

**01.** ದೊಡ್ಡಬ್ಯಾಡರಹಳ್ಳಿ ಗ್ರಾಮದಲ್ಲಿ ಕುಡಿಯುವ ನೀರಿನ ಟ್ಯಾಂಕ್ ಕಟ್ಟಲು ಗ್ರಾಮ ಪಂಚಾಯಿತಿ ವತಿಯಿಂದ ಹದ್ದುಬಸ್ತು ಅಳತೆ ಮಾಡಿ ಕಲ್ಲನ್ನು ನೆಟ್ಟಿದ್ದು, ದಿಃ16.09.2021 ರಂದು ರಾತ್ರಿ 8.00 ಗಂಟೆ ಸಮಯದಲ್ಲಿ ಚಾ.ಸಾ- 5 ಮತ್ತು 6 ರವರು ವಾಟರ್ ಟ್ಯಾಂಕ್ ನಿರ್ಮಾಣ ಮಾಡಲು ಪೂಜೆ ಮಾಡಿದ ಸ್ಥಳದಲ್ಲಿ ಇರುವಾಗ ಆರೋಪಿಗಳು ಬಂದು ಹದ್ದುಬಸ್ತು ಕಲ್ಲನ್ನು ಕಿತ್ತು ಹಾಕಿದರು ಎಂದರೆ ಸರಿಯಲ್ಲ. ಸದರಿ ವಿಚಾರವನ್ನು ಚಾ.ಸಾ- 6 ರವರು ಪಿ.ಡಿ.ಒ. ರವರಿಗೆ ತಿಳಿಸಿದರು ಎಂದರೆ ಸರಿಯಲ್ಲ. ತದನಂತರ ತಾಲ್ಲೂಕು ಕಛೇರಿಯ ಅಧಿಕಾರಿಗಳು ಬಂದು ಸ್ಥಳದಲ್ಲಿ ಸ್ಥಳ ಪರಿಶೀಲನೆ ಮಾಡಿದರು ಎಂದರೆ ಸರಿಯಲ್ಲ. ದಿಃ 17.09.2021 ರಂದು ಆರೋಪಿಗಳೆಲ್ಲ ಗ್ರಾಮ ಪಂಚಾಯಿತಿ ಕಛೇರಿಗೆ ಬಂದು ಚಾ.ಸಾ-2 ರವರ ಮೇಲೆ ಜಗಳ ತೆಗೆದು ಕರ್ತವ್ಯ ನಿರ್ವಹಿಸದಂತೆ ಅಡಚಣೆ ಮಾಡಿದರು ಎಂದರೆ ಸರಿಯಲ್ಲ. ಆರೋಪಿಗಳು ಮದ್ಯಾಹ್ನ 12.00 ರಿಂದ 1.00 ಗಂಟೆಯ ವರೆಗೆ ಕಛೇರಿಯ ಕಾಂಪೌಂಡ್ ಗೇಟ್ ಹಾಕಿ ಕರ್ತವ್ಯ ನಿರ್ವಹಿಸದಂತೆ ಅಡಚಣೆ ಮಾಡಿದ್ದಾರೆ ಎಂದರೆ ಸರಿಯಲ್ಲ. ದಿಃ 21.09.2021 ರಂದು ಈಗ ಮೇಲೆ ಹೇಳಿದಂತೆ ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸದರಿ ನಿರಾಕರಿಸಿದ ಹೇಳಿಕೆಯ ಭಾಗವನ್ನು ನಿಪಿ-**5** ಎಂದು ಗುರುತಿಸಲಾಯಿತು. ನನಗೆ ಎಲ್ಲ ವಿಚಾರ ಗೊತ್ತಿದ್ದರು ಸಹ ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಃ ಆರೋಪಿತರ ಪರ ವಕೀಲರಾದ ಶ್ರೀ ಡಿ.ಆರ್.ಕೆ. ವಕೀಲರಿಂದಃ

**01.** ಸರ್ವೇ ನಂಬರ್-57/2ರ ಮಾಲೀಕರಿಗೆ ನೋಟೀಸ್ ನೀಡಿಲ್ಲ ಎಂದರೆ ಸರಿ. ನಿರ್ಧಿಷ್ಟ ಸ್ಥಳವನ್ನು ಗುರುತಿಸದೆ ಸ್ಥಳಕ್ಕೆ ಹೋಗಿ ಅಳತೆ ಮಾಡಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ. ಹೇ. ಕೇ. ಸ. ಇದೆ.**

**C/C 2 ನೇ ಅಪರ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ.,**
**ಸಾಕ್ಷಿದಾರರ ಸಹಿ.** **ಪಾಂಡವಪುರ.**